ಪತ್ರಿಕಾ ಪ್ರಕಟಣೆ

# ವೃತ್ತಿ ತರಬೇತಿ ಹೊಂದಿರದ ಸೇವಾನಿರತ ಶಿಕ್ಷಕರ ಗಮನಕ್ಕೆ

ಎನ್.ಸಿ.ಟಿ.ಇ. ನಿಯಮಾನುಸಾರ ಸರ್ಕಾರಿ / ಸರ್ಕಾರಿ ಅನುದಾನಿತ ಹಾಗೂ ಖಾಸಗಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ವೃತ್ತಿ ಸಂಬಂಧಿತ ವಿದ್ಯಾರ್ಹತೆಯನ್ನು ಹೊಂದುವುದು ಅಗತ್ಯವಾಗಿರುತ್ತದೆ ಎಂದು ಶಿಕ್ಷಣ ಹಕ್ಕು ಕಾಯ್ದೆ ಗೊತ್ತುಪಡಿಸಿರುತ್ತದೆ.

ಆರ್.ಟಿ.ಇ. ಕಾಯ್ದೆ ಸೆಕ್ಷನ್ 23(2)ಕ್ಕೆ ಮಾಡಲಾದ ತಿದ್ದುಪಡಿಯು ಸಂಸತ್ತಿನಲ್ಲಿ ಅನುಮೋದಿತವಾಗಿದ್ದು, ಅದರಂತೆ ವೃತ್ತಿ ಸಂಬಂಧಿತ ವಿದ್ಯಾರ್ಹತೆಯನ್ನು ಹೊಂದದೆ ಕಾರ್ಯನಿರ್ವಹಿಸುತ್ತಿರುವ ಸೇವಾ ನಿರತ ಶಿಕ್ಷಕರಿಗೆ ಅಗತ್ಯ ವಿದ್ಯಾರ್ಹತೆಯನ್ನು ದಿನಾಂಕ:31-03-2019 ರೊಳಗೆ ಹೊಂದಲು ಕೊನೆಯ ಅವಕಾಶ ಮಾಡಿಕೊಡಲಾಗಿದೆ.

ಅಗತ್ಯ ಕನಿಷ್ಟ ವಿದ್ಯಾರ್ಹತೆ ಹೊಂದಿಲ್ಲದ ಶಿಕ್ಷಕರು ದಿನಾಂಕ:31-3-2019 ರೊಳಗೆ ಕನಿಷ್ಟ ವಿದ್ಯಾರ್ಹತೆ ಗಳಿಸಿಕೊಳ್ಳುವುದು ಅಗತ್ಯ. ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ DEd ಕೋರ್ಸಿಗೆ ದಾಖಲಾಗದವರು NIOS ಮೂಲಕ ವಿದ್ಯಾರ್ಜನೆ ಪಡೆಯಬಹುದಾಗಿದೆ. NIOS. ಪೋರ್ಟಲ್‌ನಲ್ಲಿ ಕೋರ್ಸಿಗೆ ನೋಂದಣಿಯನ್ನು ದಿನಾಂಕ:16-8-2017 ರಿಂದ 15-9-2017ರೊಳಗೆ ಮಾಡಿಕೊಳ್ಳಬಹುದು. ಯಾರು ಈ ಹಂತದಲ್ಲಿ ದಾಖಲಾಗುವುದಿಲ್ಲವೋ ಅವರು ಕೋರ್ಸನ್ನು ದಿನಾಂಕ:31-3-2019ರೊಳಗೆ ಪೂರ್ಣಗೊಳಿಸಲು ಸಾಧ್ಯವಿಲ್ಲ ಹಾಗೂ ತಕ್ಷಣದಿಂದ ಶಿಕ್ಷಕರಾಗಿ ಮುಂದುವರೆಯುವುದು ಸ್ಥಗಿತಗೊಳ್ಳುತ್ತದೆ.

ಸೇವಾನಿರತ ಶಿಕ್ಷಕರು ಈಗಾಗಲೇ ಅಗತ್ಯ ವಿದ್ಯಾರ್ಹತೆ ಪಡೆಯಲು ನೋಂದಣಿ ಮಾಡಿಕೊಂಡಿದ್ದಲ್ಲಿ ಮತ್ತೊಮ್ಮೆ ಆನ್ ಲೈನ್ ಪೋರ್ಟಲ್‌ನಲ್ಲಿ ನೋಂದಣಿ ಮಾಡುವ ಅವಶ್ಯಕತೆ ಇರುವುದಿಲ್ಲ. ಆದರೆ ದಿನಾಂಕ:31-3-2019 ರೊಳಗೆ ಈ ವಿದ್ಯಾರ್ಹತೆಯನ್ನು ಪಡೆಯಬೇಕಾಗಿರುತ್ತದೆ.

ವೃತ್ತಿಗೆ ಅಗತ್ಯವಿರುವ ಕನಿಷ್ಟ ವಿದ್ಯಾರ್ಹತೆಯನ್ನು ಹೊಂದಿರದ ಶಿಕ್ಷಕರು ಅಗತ್ಯವಿರುವ NIOS ವತಿಯಿಂದ ನಡೆಸಲಾಗುವ D.El.Ed ವೃತ್ತಿ ತರಬೇತಿಗೆ ಪ್ರವೇಶ ಪಡೆಯಲು 12ನೇ ತರಗತಿಯಲ್ಲಿ (ಪಿ.ಯು.ಸಿ) ಕನಿಷ್ಟ ಶೇ50 ರಷ್ಟು ಅಂಕಗಳನ್ನು ಗಳಿಸಿರಬೇಕು. ಒಂದು ವೇಳೆ ಪಿ.ಯು.ಸಿ.ಯಲ್ಲಿ ಶೇ50 ರಷ್ಟು ಅಂಕ ಗಳಿಸದ ಶಿಕ್ಷಕರು ಇದ್ದಲ್ಲಿ ಅವರಿಗೂ ಪ್ರವೇಶಾವಕಾಶ ನೀಡಲಾಗುತ್ತದೆ. ಆದರೆ ಅಂತಹ ಶಿಕ್ಷಕರು D.El.Ed ಕೋರ್ಸು ಪೂರ್ಣಗೊಳಿಸುವ ಮುಂಚಿತವಾಗಿ ಪಿ.ಯು.ಸಿ.ಯಲ್ಲಿ ಪುನರ್ ಪರೀಕ್ಷೆಯನ್ನು ತೆಗೆದುಕೊಂಡು ಶೇ50 ರಷ್ಟು ಅಂಕಗಳನ್ನು ಗಳಿಸಬೇಕಾಗುತ್ತದೆ. +2 ಶಿಕ್ಷಣದಲ್ಲಿ ಶೇ50 ರಷ್ಟು ಅಂಕಗಳಿಸಿದ ಶಿಕ್ಷಕರಿಗೆ ಮಾತ್ರವೇ D.El.Ed ಪ್ರಮಾಣ ಪತ್ರವನ್ನು ನೀಡಲಾಗುತ್ತದೆ.

ಒಂದು ವೇಳೆ ಶಿಕ್ಷಕರು 15-9-2017 ರೊಳಗೆ ನೋಂದಣಿ ಮಾಡಿಕೊಳ್ಳದಿದ್ದಲ್ಲಿ ಅವರು ಸೇವೆಯಿಂದ ತಕ್ಷಣ ತೆಗೆದುಹಾಕುವ / ವಜಾಗೊಳಿಸುವ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ.

Honnamba S

ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ
ನೃಪತುಂಗ ರಸ್ತೆ, ಬೆಂಗಳೂರು - 01

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)
ಸಾ.ಶಿ.ಇಲಾಖೆ, ಆಯುಕ್ತರ ಕಛೇರಿ
ಬೆಂಗಳೂರು.

LEE/DPI/ALL LETTERS/2017

Paper Notification

## Attention to In-service untrained teachers

RTE Act stipulates that the teachers working in government/government aided / unaided private schools need to have requisite minimum professional qualification as per NCTE norms.

In-service teachers without requisite qualification are given the last opportunity to acquire this by 31st March 2019 as per the amendment to the section 23(2) of the RTE act to extend the period for such training to 31 March 2019 which has been passed by the parliament.

Those who do not possess the minimum qualification shall acquire the qualification by 31-3-2019. Those who are not enrolled for the DEd course in any recognized institution can study the course through NIOS. The registration for the course in NIOS portal will open from 16-8-2017 till 15-9-2017. Those who do not enroll now could not complete the course by 31-3-2019 and shall cease to become teachers immediately.

In-service teachers who have already enrolled for acquiring the requisite qualification, need not register once again through the online portal but they have to complete the course within 31-3-2019

Teachers who do not fulfill the minimum eligibility requirement for taking admission in D.El.Ed programme that is 50% in class 12, will have to join NIOS and re-appear for the Class 12th exam to achieve the minimum qualification. They would however be eligible for provisional admission in D.El.Ed. programme of NIOS, subject to them acquiring 50% marks in Class 12 before completing the D.El.Ed programme of NIOS. This would facilitate such teachers to pursue the programmes concurrently. A D.El.Ed Certificate would be given only when the teacher acquires 50% at +2.

Unqualified in service teachers who fail to enroll on or before 15th Sept 2017 are liable to face removal or dismissal from the service immediately.

Honnamba S.
ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ
ನೃಪತುಂಗ ರಸ್ತೆ, ಬೆಂಗಳೂರು - 01

DIRECTOR (PRY EDN)
Office of the Commissioner for
Public Instruction, Bangalore.

LEE/DPI/ALL LETTERS/2017